The Doctor K. G. Sreenivasa Murthy, Nurse Queeny Abraham and Smt. Parvathamma, A.N.M. who were concerned in giving injection to Sri Gopala Rao, admitted that they failed to give test doze before giving injection.

The Director of Health and Family Planning Services proceeded to the spot and inspected the dead body of Sri Gopala Rao.

The Director of Health and Family Planning Services after having been satisfied of dereliction of duty on their part, after the preliminary enquiry, has suspended the Doctor, Nurse and Auxiliary Nurse Midwife who have failed to give test doze of Streptomycin to the late Gopal Rao, pending a detailed enquiry in the matter."

Notice of Adjournment Motion *re*: the affairs at the Hyderabad Karnatak Education Society, Gulbarga

†ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ನಾನು ಒಂದು ನಿಲುವಳಿ ಸೂಚನೆ ಕಳಿಸಿದ್ದೆ. ಅದು ನಮ್ಮ ಗುಲ್ಬರ್ಗಾ ಜಿಲ್ಲೆಗೆ ಸಂಬಂಧಪಟ್ಟದ್ದು. ಇಲ್ಲಿ ಹೈದರಾಬಾದು ಕರ್ನಾಟಕ ಎಜುಕೇಷನ್ ಸೊಸೈಟಿ ಗುಲ್ಬರ್ಗಾ ಎನ್ನುವ ಒಂದು ಸಂಸ್ಥೆ ಇದೆ. ಇದರ ಸೂಪರ್ ವಿಷನ್‌ನಲ್ಲಿ ಇಲ್ಲಿ ಸಾಕಷ್ಟು ಕಾರ್ಯಜುಗಳು ನಡೆಯುತ್ತಿವೆ. ಆದರೆ ಕಳೆದ ಹತ್ತೊಂದು ವರ್ಷಗಳಿಂದಲೂ ಈ ಸಂಸ್ಥೆಯಲ್ಲಿ ಎಲೆಕ್ಷನ್ ಆಗಿಲ್ಲ ಎಂದು ಇದರ ಮ್ಯಾನೇಜುಮೆಂಟಿನ ಬಗ್ಗೆ ಜನರಿಂದ ಒಂದು ರೀತಿಯ ಕೂಗೆದ್ದು ಈಗ ಇಲ್ಲಿನ ಪ್ರಮುಖರಾದ ಶ್ರೀ ಧರ್ಮಣ್ಣಪ್ಪ, ಅಫಜಲ್‌ಪುರ್‌ಕರ್, ಎಸ್. ಎಸ್. ಪಾಟೀಲ್, ಅಬ್ದುಲ್ ಖಾದರ್ ಸರದ್‌ಗೀ ಇವರೂ ಅವರೇಶಗೌಡ ಇತ್ಯಾದಿ ಕೆಲವರು ಇಂದು ಇಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ ಮತ್ತು ಇದು ಒಂದು ರೀತಿಯ ಸೈಕ್ಲಿಕ್ ಆಗಿದೆ. ಆದರೆ ಇಲ್ಲಿನ ಪರಿಸ್ಥಿತಿ ಬಹಳ ಸೀರಿಯಸ್ ಆಗಿದೆ ಎಂದು ನನಗೆ ಟೆಲಿಗ್ರಾಂ ಬಂದಿದೆ ಹಾಗೂ ಇನ್ನಿತರ ಸದಸ್ಯರುಗಳಿಗೂ ಇಲ್ಲಿಗೆ ಬಂದಿದೆ. ಇದನ್ನು ಸಭೆಯ ಅವಗಾಹನೆಗೆ ತರದೇ ತಮ್ಮ ಅವಗಾಹನೆಗಾಗಿ ಈ ಟೆಲಿಗ್ರಾಂ ಈಗ ಕಳುಹಿಸಿಕೊಡುತ್ತೇನೆ.

ಇದರ ಬಗ್ಗೆ ತಾವು ಒಪ್ಪಿಗೆ ಕೊಡದೇ ಇರಲು ಇದು ಖಾಸಗೀ ವ್ಯವಹಾರ ಎಂದು ಹೇಳಬಹುದು. ಆದರೆ ಇದು ಸರಿಯಲ್ಲ ಎಂದು ತೋರಿಸಲು ತಮಗೆ ನಾನು ಒಂದು ವಿಚಾರ ಇಲ್ಲಿ ತಿಳಿಸಬೇಕಾಗಿದೆ. ಮೈಸೂರು ರಿಜಿಸ್ಟ್ರೇಷನ್ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ಈ ಸಂಸ್ಥೆಯೂ ಕೂಡ ಇಲ್ಲಿ ರಿಜಿಸ್ಟರು ಆಗಿದೆ. ಇದರ ಪ್ರಕಾರ ಇಲ್ಲಿ ಚುನಾವಣೆಗಳಾಗಬೇಕಾಗಿತ್ತು. ಆದರೆ 11 ವರ್ಷಗಳಿಂದಲೂ ಇಲ್ಲಿ ಚುನಾವಣೆಯನ್ನೇ ನಡೆಸಿಲ್ಲ. ಆದುದರಿಂದ ಇದರಲ್ಲಿ ಸರಕಾರದ ಅಧಿಕಾರ ಇದೆ ಎಂದು ನಾನು ಹೇಳಲು ತಮಗೆ ಇದರ ಸೆಕ್ಷನ್ ವಿವರಗಳನ್ನೂ ಕಳುಹಿಸಿಕೊಡುತ್ತೇನೆ. ಆಲ್ಲದೆ ಇದಕ್ಕೆ ಗ್ರಾಂಟ್ ಇನ್ ಏಡ್ ಕೋಡ್ ರೂಲ್ಸು ಪ್ರಕಾರ ಸಹಾಯ ಬರುತ್ತದೆ. ಇದರ ಮೂಲಕ ಕೂಡ ಸರಕಾರ ಪ್ರಶ್ನೆ ಮಾಡಲು ಬರುತ್ತದೆ ಮತ್ತು ತಕ್ಕ ಕ್ರಮ ತೆಗೆದುಕೊಳ್ಳಬಹುದು. ಇಲ್ಲಿಯವರೆಗೂ ಸರಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರ ಪರಿಸ್ಥಿತಿ ಬಹಳ ಗಂಭೀರವಾಗಿರುವುದರಿಂದ ತಮ್ಮ ಗಮನಕ್ಕೆ ಇಲ್ಲಿ ತರುತ್ತಿದ್ದೇನೆ.

ಈಗ ಇರತಕ್ಕಂಥ ಗಂಭೀರ ಪರಿಸ್ಥಿತಿಯಲ್ಲಿ ಅಲ್ಲಿಯ ಪ್ರಮುಖ ಜನರು ಉಪವಾಸ ಪ್ರಾರಂಭ ಮಾಡಿದ್ದಾರೆ. ಈ ಕಾರಣದಿಂದ ಅಲ್ಲಿ ಗಂಭೀರ ಪರಿಸ್ಥಿತಿ ಉದ್ಭವಿಸಿದೆ. ಇದು ಬಹಳ ಪ್ರಮುಖವಾದ ಪ್ರಶ್ನೆಯಾದ್ದರಿಂದ ಈ ಸಭೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ತಾವು ಈ ವಿಷಯವನ್ನು ಅಡ್ಮಿಟ್ ಮಾಡಿ ನನಗೆ ಕನ್‌ಸೆಂಟ್ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

2-30 P M.

ಅಧ್ಯಕ್ಷರು.—ವಿಚಾರ ಮಾಡುತ್ತೇನೆ.

Sri V. N. PATIL.—Sir, just now I have received a telegram and I shall read the contents of it :

" Misappropriation Mis-Management in Hyderabad Karnatak Education Society, Gulbarga, is going on since eleven years without elections against the Act and Rules, hunger strike is started by Dharma Rao, Afzalpurker, S. S. Patil, Abdul Khadar Saradgi, Amaresh Gouda—situation is alarming—remove President of the Society and enquiry be held.

Chairman all parties action committee—Dharma Rao Afzalpurkar, Jagat, Gulbarga. "

Sri K. PUTTASWAMY (Minister for Parliamentary Affairs).—Sir, how can you permit all these things ? The same thing was heard from Sri Nagappa.

Sri BAPU GOWDA.—Sir, the same thing is being repeated by several members. How can you permit it ?

Mr. SPEAKER.—The hon. member may pass it on to me.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಬ್ರೀಚ್ ಆಫ್ ಪೀಸ್ ಬಗ್ಗೆ ನನಗೊಂದು ಪೈರ್ ಬಂದಿವೆ. ಅದರ ಸಲುವಾಗಿ ಹೇಳಬೇಕಾಗಿದೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಪ್ಪನವರು ಏನು ಪ್ರಸ್ತಾಪ ಮಾಡಿದರು, ಆ ಸೊಸೈಟಿಯಲ್ಲಿ ಕೆಲವು ಶಾಂತ ರೀತಿಯಿಂದ ನಡೆದಿದೆ ಎಂಬುದಾಗಿ ನನಗೆ ಪೈರ್ ಬಂದಿದೆ. ಈ ದಿವಸ ಕೆಲವರು ಆ ಸೊಸೈಟಿಯಲ್ಲಿ ತಮಗೆ ಯಾವ ಅಧಿಕಾರ ಇಲ್ಲ ಎಂಬ ಕಾರಣದಿಂದ ಹಂಗರ್ ಸ್ಟ್ರೈಕ್ ಮಾಡುವುದರ ಮೂಲಕ ಜನರ ಮನಸ್ಸನ್ನು ಕೆರಳಿಸಿದ್ದಾರೆ. ಏನಾದ್ರು ಕಾಯಿದೆ ಮತ್ತು ಸುವ್ಯವಸ್ಥೆಯನ್ನು ಕೆಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆದಕಾರಣ ಈ ವಿಷಯದ ಬಗ್ಗೆ ಏನು ತೀರ್ಮಾನ ಕೈಕೊಳ್ಳಬೇಕೆಂಬುದನ್ನು ತಮಗೇ ಬಿಟ್ಟಿದ್ದೇನೆ.

Sri D. B. KALMANKAR.—Sir, a similar telegram has been received by me also.

Mr. SPEAKER.—I am not going to permit it to be read. If the members have any documents they may be passed on to me for necessary further action.

Sri D. B. KALMANKAR.—Sir, the situation is alarming. Many advocates are on hunger strike. Can we expect a discussion on this matter during the course of this day ?

Mr. SPEAKER.—I cannot promise anything. I shall take a decision in due course.

(iv) Collection of water levy

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ನಾನು 3 ದಿವಸಗಳ ಕೆಳಗೆ ವಾಟರ್ ರೆವಿಯು ಬಗ್ಗೆ ಜನರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ನನ್ನು ತಮಗೆ ಕಳಿಸಿದ್ದೆ

Mr. SPEAKER.—I remember that the Hon'ble Member had promised to pass on one document, relating to this subject, but he has not done it.

ಶ್ರೀ ಬಿ. ಪಿ. ಗಂಗಾಧರ್.—ಮೆಮೋ ಹಾಕಿ ತಮಗೆ ಕಳಿಸಿವೆ. ಅಲ್ಲಿಯ ನೈತರು ಈ ಬಗ್ಗೆ ಬಹಳ ತೊಂದರೆಗೆ ಒಳಗಾಗಿದ್ದಾರೆ.